## ನಿಮ್ಮೊಡನೆ

# ಎಲ್ಲೋ ಮಗು ಅಳುತಾ ಇದೆ...

ವೈದ್ಯಕೀಯ ಸೌಲಭ್ಯಗಳ ಕೊರತೆ, ವೈದ್ಯರ ಕೊರತೆ, ಔಷಧಿಗಳ ಅಲಭ್ಯತೆ– ಹೀಗೆ, ಸರ್ಕಾರಿ ಆಸ್ಪತ್ರೆಗಳ ದುರವಸ್ಥೆ ಒಂದೆರಡಲ್ಲ. ಈ ದುರವಸ್ಥೆಗೆ ಮೊದಲು ತುತ್ತಾಗುವುದೇ ಮಕ್ಕಳು ಹಾಗೂ ಮಹಿಳೆಯರು!

ಶ್ರೀಗಂಧದ ನಾಡು, ಸಿಲಿಕಾನ್ ವ್ಯಾಲಿ ಎನ್ನುವ ವಿಶೇಷಣಗಳ ಮೂಲಕ ಜಾಗತಿಕ ನಕಾಶೆಯಲ್ಲಿ ಕರ್ನಾಟಕವನ್ನು ಗುರ್ತಿಸುತ್ತೇವೆ. ಇನ್ನುಮುಂದೆ 'ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸಾಯುವ ನಾಡುಗಳಲ್ಲೊಂದು' ಎನ್ನುವ ಮೂಲಕವೂ ರಾಜ್ಯವನ್ನು ಗುರ್ತಿಸಬಹುದು. ಮಕ್ಕಳ ಸಾವಿನ ಸಂಖ್ಯೆ ಹೆಚ್ಚಾಗಿರುವ ಭಾರತೀಯ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕಕ್ಕೆ ನಾಲ್ಕನೇ ಸ್ಥಾನ ಎಂದು 'ನಾಗರಿಕ ನೋಂದಣಿ ವ್ಯವಸ್ಥೆ'ಯ ಅಂಕಿಅಂಶಗಳು ತಿಳಿಸಿವೆ. ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಹಾಗೂ ಮಹಾರಾಷ್ಟ್ರ ರಾಜ್ಯಗಳು ಸದ್ಯಕ್ಕೆ ಕರ್ನಾಟಕಕ್ಕಿಂತಲೂ ಶಿಶು ಮರಣದ ಕುಖ್ಯಾತಿಯಲ್ಲಿ ಮುಂದಿವೆ. ಕಳೆದ ಎರಡು ದಶಕಗಳಲ್ಲಿ ಜಾಗತಿಕವಾಗಿ ಮಕ್ಕಳ ಮರಣ ಪ್ರಮಾಣ ಅರ್ಧದಷ್ಟು ಕಡಿಮೆಯಾಗಿದೆ. ಆದರೆ, ಭಾರತ ಮಾತ್ರ ಎಳೆಯರ ಸಾವಿನ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. 2013ರಲ್ಲಿ 10 ಲಕ್ಷಕ್ಕೂ ಹೆಚ್ಚು ಮಕ್ಕಳು ಭಾರತದಲ್ಲಿ ಸಾವಿಗೀಡಾಗಿದ್ದರು ಎಂದು ವಿಶ್ವಸಂಸ್ಥೆ ವರದಿ ತಿಳಿಸಿದೆ.

2013ರಲ್ಲಿ ರಾಜ್ಯದಲ್ಲಿ ಮೃತಪಟ್ಟ 1ರಿಂದ 14 ವರ್ಷ ವಯಸ್ಸಿನ ಮಕ್ಕಳ ಸಂಖ್ಯೆ ಸುಮಾರು 1.87 ಲಕ್ಷ. ಇವರಲ್ಲಿ 15 ಸಾವಿರಕ್ಕೂ ಹೆಚ್ಚು ಮಕ್ಕಳು ಇನ್ನೂ ಒಂದು ವರ್ಷ ತುಂಬದ ಕಂದಮ್ಮಗಳು. ಸಾವಿಗೀಡಾದ ಒಟ್ಟು ಮಕ್ಕಳಲ್ಲಿ ಹೆಣ್ಣುಮಕ್ಕಳ ಸಂಖ್ಯೆ 80 ಸಾವಿರಕ್ಕೂ ಹೆಚ್ಚು. ನಗರ ಪ್ರದೇಶಗಳಿಗೆ ಹೋಲಿಸಿದರೆ ಗ್ರಾಮೀಣ ಪ್ರದೇಶಗಳಲ್ಲಿ ನತದೃಷ್ಟ ಮಕ್ಕಳ ಸಂಖ್ಯೆ ಹೆಚ್ಚು. ಸಾಯುವ ಶೇ 66.9 ಮಕ್ಕಳು ಗ್ರಾಮೀಣ ಪ್ರದೇಶದವರೇ ಆಗಿದ್ದಾರೆ. ಯಾವುದೇ ನಾಗರಿಕ ಸಮಾಜ ಅಥವಾ ಪ್ರಭುತ್ವ ನಾಚಿಕೆ ಹಾಗೂ ಪಾಪಪ್ರಜ್ಞೆಯಿಂದ ತಲೆತಗ್ಗಿಸುವಂತಿರುವ ಈ ವಿವರಗಳು ಕೇವಲ ಅಂಕಿಅಂಶಗಳಂತೆ ನಮ್ಮ ಪ್ರತಿನಿಧಿಗಳಿಗೆ ಕಾಣಿಸುತ್ತಿರುವುದು ಖೇದಕರ.

ಮಕ್ಕಳ ಸಾವಿಗೆ ಅನೇಕ ಕಾರಣಗಳಿವೆ. ಗರ್ಭಿಣಿಯರ ರಕ್ತಹೀನತೆ, ಸಮರ್ಪಕ ವೈದ್ಯಕೀಯ ಸವಲತ್ತು ದೊರೆಯದಿರುವುದು, ಅವಧಿಪೂರ್ವ ಪ್ರಸವ, ಮಕ್ಕಳಲ್ಲಿ ಅಪೌಷ್ಟಿಕತೆ– ಇವೆಲ್ಲವೂ ಕಂದಮ್ಮಗಳ ಸಾವಿಗೆ ಕಾರಣಗಳಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ, ವಿಶೇಷವಾಗಿ ಉತ್ತರ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕದ ಊರುಗಳಿಂದ ಕೆಲಸ ಹುಡುಕಿಕೊಂಡು ನಗರಕ್ಕೆ ವಲಸೆ ಬರುವ ಕುಟುಂಬಗಳು ಹೆಚ್ಚುತ್ತಿವೆ. ಈ ತಿರುಗಾಟ ಕೂಡ ಗರ್ಭಿಣಿ ಮಹಿಳೆಯರು ಸೂಕ್ತ ಚಿಕಿತ್ಸೆ ಪಡೆಯುವಲ್ಲಿ ಅಡಚಣೆಯಾಗಿ ಪರಿಣಮಿಸಿದೆ. ಅನ್ನದ ಹುಡುಕಾಟದಲ್ಲಿ ಆರೋಗ್ಯ ಕನಿಷ್ಠ ಆದ್ಯತೆಯಾಗಿ ಪರಿಣಮಿಸುತ್ತದೆ. ಇಂಥ ಹೆಣ್ಣುಮಕ್ಕಳಿಗೆ ಸಮೀಪದಲ್ಲಿಯೇ ಚಿಕಿತ್ಸೆ ಒದಗಿಸುವ ಹಾಗೂ ಅವರಲ್ಲಿ ಆರೋಗ್ಯದ ಕುರಿತು ಅರಿವು ಮೂಡಿಸುವ ಪ್ರಯತ್ನಗಳು ಹೆಚ್ಚು ಹೆಚ್ಚು ನಡೆಯಬೇಕಿದೆ, ನಗರ ಪ್ರದೇಶಗಳ ಕೆಲವು ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಸೌಲಭ್ಯಗಳು ಲಭ್ಯವಿದ್ದರೂ, ಚಿಕಿತ್ಸೆ ಪಡೆಯಲು ಜನಸಾಮಾನ್ಯರು ಪಡಿಪಾಟಲು ಪಡಬೇಕಾದ ಪರಿಸ್ಥಿತಿಯಿದೆ. ಗ್ರಾಮೀಣ ಪ್ರದೇಶಗಳ ಪರಿಸ್ಥಿತಿ ಇನ್ನೂ ದಾರುಣವಾದುದು. ಅಲ್ಲಿ ಸ್ತ್ರೀರೋಗ ತಜ್ಞರು, ಮಕ್ಕಳ ತಜ್ಞರು ಓಯಸಿಸ್‌ಗಳೇ ಸರಿ. ಹೆಚ್ಚಿನ ಸಂಬಳ ನೀಡಿದರೂ ನುರಿತ ವೈದ್ಯರು ಗ್ರಾಮೀಣ ಪರಿಸರದಲ್ಲಿ ಸೇವೆ ಸಲ್ಲಿಸಲು ಮುಂದಾಗದಿರುವುದು ಕೂಡ ಪರಿಸ್ಥಿತಿ ಹದಗೆಡಲಿಕ್ಕೆ ಕಾರಣವಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಸೇವಾ ಮನೋಭಾವ ಕ್ಷೀಣಿಸುತ್ತಿರುವುದನ್ನು ಗಮನಿಸಿದರೆ ಸಾಮಾಜಿಕ ಸ್ವಾಸ್ಥ್ಯದ ಕುರಿತೇ ಆತಂಕ ಪಡುವಂತಾಗಿದೆ.

ಇತ್ತೀಚೆಗಷ್ಟೇ ಬೆಂಗಳೂರಿನಲ್ಲಿ ಗಗನಾ ಎನ್ನುವ ಬಾಲಕಿಯೊಬ್ಬಳು ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರಕದ ಕಾರಣ ಸಾವಿಗೀಡಾದ ಘಟನೆ, ಸರ್ಕಾರಿ ಆಸ್ಪತ್ರೆಗಳಲ್ಲಿನ ಅವ್ಯವಸ್ಥೆಗೆ ಕನ್ನಡಿ ಹಿಡಿದಿತ್ತು. ಈಗ 'ನಾಗರಿಕ ನೋಂದಣಿ ವ್ಯವಸ್ಥೆ'ಯ ಅಧ್ಯಯನ ಮತ್ತೊಮ್ಮೆ ನಾಡಿನ ಆರೋಗ್ಯ ಕ್ಷೇತ್ರದ ಅನಾರೋಗ್ಯವನ್ನು ಬಯಲು ಮಾಡಿದೆ. ವೈದ್ಯಕೀಯ ಸೌಲಭ್ಯಗಳ ಕೊರತೆ, ವೈದ್ಯರ ಕೊರತೆ, ಔಷಧಿಗಳ ಅಲಭ್ಯತೆ– ಹೀಗೆ, ಸರ್ಕಾರಿ ಆಸ್ಪತ್ರೆಗಳ ದುರವಸ್ಥೆ ಒಂದೆರಡಲ್ಲ. ಈ ದುರವಸ್ಥೆಗೆ ಮೊದಲು ತುತ್ತಾಗುವುದೇ ಮಕ್ಕಳು ಹಾಗೂ ಮಹಿಳೆಯರು! ಶಿಶು ಮರಣಗಳ ಜೊತೆಗೆ ರಾಜ್ಯದ 1734 ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ ಎನ್ನುವ 'ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ'ಯ ವರದಿಯನ್ನೂ ಗಮನಿಸಬೇಕು. ಶಿಕ್ಷಣ ಹಾಗೂ ಆರೋಗ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಜನಪ್ರಿಯ ಯೋಜನೆಗಳ ಅನುಷ್ಠಾನದಲ್ಲಿ ಸರ್ಕಾರಕ್ಕಿರುವ ಹುಮ್ಮಸ್ಸು, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳನ್ನು ಬೇರುಮಟ್ಟದಲ್ಲಿ ಬಲಪಡಿಸುವ ನಿಟ್ಟಿನಲ್ಲಿಲ್ಲ. ಈ ಎರಡೂ ಕ್ಷೇತ್ರಗಳನ್ನು ಸಶಕ್ತಗೊಳಿಸುವುದು ಸ್ವಸ್ಥ ಸಮಾಜದ ಬುನಾದಿ ಭದ್ರಪಡಿಸುವ ಕೆಲಸ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕಾಗಿದೆ.

■ ರಘುನಾಥ ಚ.ಹ.

